

ಅರುಣ ಪಿ. ಭಟ್ಟ

## ವಾರಭವಿಷ್ಯ: 14.10.2021ರಿಂದ 20.10.2021ವರೆಗೆ




ಕೌಟುಂಬಿಕ ವ್ಯವಹಾರಗಳನ್ನು ನಡೆಸುತ್ತಿರುವವರು ಆ ಬಗ್ಗೆ ಸೋದರ ಸೋದರಿಯರ ಜತೆ ಚರ್ಚೆ ನಡೆಸಲಿದ್ದೀರಿ. ನಿಮ್ಮ ಸಾಮಾಜಿಕ ಹಾಗೂ ರಾಜಕೀಯದ ಬದುಕು ವೃದ್ಧಿಯಾಗುತ್ತಾ ಸಾಗುತ್ತದೆ. ದೈಹಿಕವಾಗಿ ಆಯಾಸ ಅನುಭವಕ್ಕೆ ಬರಲಿದ್ದು, ಇದರಿಂದ ಬೇಸರಕ್ಕೆ ಒಳಗಾಗಲಿದ್ದೀರಿ. ಉಸಿರಾಟದ ಸಮಸ್ಯೆ ಹಾಗೂ ರಕ್ತದೊತ್ತಡದ ಸಮಸ್ಯೆ ಕೂಡ ನಿಮ್ಮನ್ನು ಕಾಡಬಹುದು. ಶುಭದಿನ 20. ಸೌಂದರ್ಯ ಲಹರಿ ಪಠಿಸಿರಿ.




ವ್ಯಾಪಾರ ವ್ಯವಹಾರದ ವಿಸ್ತರಣೆ ಸಲುವಾಗಿ ಪ್ರಯಾಣ ಮಾಡಬೇಕಾಗುತ್ತದೆ. ಆರೋಗ್ಯದಲ್ಲಿ ಸಣ್ಣಪುಟ್ಟ ಏರುಪೇರುಗಳು ಕಾಣಬಹುದು. ವಾರದ ಮಧ್ಯ ಭಾಗದಲ್ಲಿ ಪಾರ್ಟಿಗಳಲ್ಲಿ ಹೆಚ್ಚು ಭಾಗವಹಿಸುವ ಸಾಧ್ಯತೆಗಳಿವೆ. ರಾಜಕಾರಣಿಗಳಿಗೆ ದೊಡ್ಡ ಮಟ್ಟದಲ್ಲಿ ಪ್ರಗತಿ ಆಗಬಹುದು. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿ ಜತೆಗೆ ಉದ್ವಿಗ್ನ ವಾತಾವರಣ ಇರುತ್ತದೆ. ಶುಭದಿನ 17. ಶಿವಕವಚ ಪಠಿಸಿರಿ.




ಸಮಾಜದಲ್ಲಿ ಅತ್ಯುತ್ತಮ ವ್ಯಕ್ತಿಯಾಗಿ ನಿಮ್ಮ ಬಿಂಬ ಅಥವಾ ಪ್ರಭಾವಳಿ ಬೆಳೆಯುತ್ತದೆ. ಈ ಹಿಂದೆ ನೀವು ಹಾಕಿದ ಶ್ರಮಕ್ಕೆ ಈಗ ಉತ್ತಮ ಪ್ರತಿಫಲ ದೊರೆಯಲಿದೆ. ಕ್ರೀಡೆ ಹಾಗೂ ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮುಂದುವರಿಸಲಿದ್ದೀರಿ. ಆರೋಗ್ಯದಲ್ಲಿ ಸಮಸ್ಯೆಯಾಗಿ, ಆಸ್ಪತ್ರೆಗೆ ದಾಖಲಾಗಬಹುದು. ವೈಯಕ್ತಿಕವಾಗಿ ಕಿರಿಕಿರಿ ಅನುಭವಿಸುತ್ತೀರಿ. ಶುಭದಿನ 18. ಕಾಲಭೈರವನ ಸೇವೆ ಮಾಡಿರಿ.




ಅಂದುಕೊಂಡ ವೇಗದಲ್ಲಿ ಸಂಪತ್ತು ವೃದ್ಧಿ ಆಗುತ್ತಿಲ್ಲ ಎಂಬ ಸಂಗತಿ ನಿಮ್ಮ ಚಿಂತೆಗೆ ಕಾರಣ ಆಗಲಿದೆ. ಆದರೆ ಈ ಅವಧಿಯಲ್ಲಿ ನಿಮಗೆ ಜನ ಬೆಂಬಲ ಸಿಗುತ್ತದೆ. ನಿಮ್ಮ ವಿಶ್ವಾಸಾರ್ಹತೆಯನ್ನು ನಾಶ ಮಾಡುವುದಕ್ಕೆ ವಿರೋಧಿ ಪಾಳಯದವರು ನಿರಂತರವಾಗಿ ಪ್ರಯತ್ನ ಪಡುತ್ತಾರೆ. ಆರೋಗ್ಯದಲ್ಲಿ ಸಮಸ್ಯೆಯಾಗಬಹುದು. ಗ್ರಹಗತಿ ಸ್ವಲ್ಪಮಟ್ಟಿಗೆ ಸಕಾರಾತ್ಮಕವಾಗಿದೆ. ಶುಭದಿನ 20. ಚಂಡಿ ಪಾರಾಯಣ ಮಾಡಿರಿ.




ಈ ಅವಧಿಯಲ್ಲಿ ನೀವು ಹಾಕಿದ ಶ್ರಮಕ್ಕೆ ಯಶಸ್ಸು ದೊರೆಯಲಿದೆ. ನಿಮ್ಮ ಸ್ಥಾನಮಾನವು ಉತ್ತಮಗೊಳ್ಳಲಿದೆ. ನೀವು ಇರಿಸಿಕೊಂಡಿರುವ ಆರ್ಥಿಕ ಗುರಿಯನ್ನು ತಲುಪುವ ಮಟ್ಟಕ್ಕೆ ಬರುತ್ತೀರಿ. ವಿವಾಹಿತರಿಗೆ ಮಕ್ಕಳು ತುಂಬ ಸಂತೋಷವಾಗಿರುತ್ತಾರೆ. ವಾರದ ಮಧ್ಯ ಭಾಗದಲ್ಲಿ ಇತರರು ನಿಮಗೆ ತೊಂದರೆ ನೀಡುತ್ತಾರೆ. ವ್ಯಾಪಾರದಲ್ಲಿ ನೀವು ನಷ್ಟ ಅನುಭವಿಸಲಿದ್ದೀರಿ. ಶುಭದಿನ 14. ಲಿಂಗಾಷ್ಟಕ ಪಠಣ ಮಾಡಿರಿ.




ಸ್ವಂತ ಕಟ್ಟಡದಲ್ಲಿರುವ ಕೆಲವು ವ್ಯವಸ್ಥೆಗಳನ್ನು ಬದಲಾವಣೆ ಮಾಡಲು ಮುಂದಾಗುತ್ತೀರಿ. ನಿಮ್ಮಲ್ಲಿ ಕೆಲವರಿಗೆ ಏಕತಾನತೆ ಕಾಡಬಹುದು. ಇದರಿಂದ ಹೊರಬರಬೇಕು ಅಂದರೆ ಕುಟುಂಬದವರ ಅಗತ್ಯಕ್ಕೆ ಸ್ಪಂದಿಸಿರಿ. ನಿಗದಿತ ಅವಧಿಯೊಳಗೆ ವಹಿಸಿದ ಕೆಲಸವನ್ನು ಪೂರ್ಣಗೊಳಿಸಿ. ಉದ್ಯೋಗಿಗಳಲ್ಲಿ ನಿಮ್ಮ ಹಕ್ಕಿನ ಬಗ್ಗೆ ಚರ್ಚೆ ಅಂತಿಮಗೊಳ್ಳಲಿದೆ. ಶುಭದಿನ 18. ಸಂಕಷ್ಟಹರ ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಉದ್ಯಮಿಗಳು ವ್ಯಾಪಾರಸ್ಥರಿಗೆ ಉತ್ತಮವಾದ ಸಮಯ. ನೆರೆಹೊರೆಯವರ ಜತೆಗೆ ಉತ್ತಮ ಬಾಂಧವ್ಯ ಇರಿಸಿಕೊಳ್ಳಲು ಹಲವು ಬಗೆಯಲ್ಲಿ ಅವಕಾಶ ದೊರೆಯಲಿದೆ. ಅವರ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗುತ್ತೀರಿ. ನಿಮ್ಮ ಇಂಥ ನಡವಳಿಕೆಯಿಂದ ಅವರಿಗೆ ಗೌರವ ಹೆಚ್ಚಾಗಲಿದೆ. ಉಸಿರಾಟ ಸಮಸ್ಯೆ ಮಂಡಿ ನೋವು ನಿಮ್ಮನ್ನು ಕಾಡಬಹುದು. ಶುಭದಿನ 16. ದೇವ್ಯಪರಾದ ಕ್ಷಮಾಪನ ಸ್ತೋತ್ರ ಪಠಿಸಿರಿ.




ಈ ವರೆಗಿನ ಕೆಲಸಗಳು ಹೇಗೆ ಆಗಿವೆ ಎಂದು ಪರಿಶೀಲಿಸಿಕೊಳ್ಳಲು ಹೆಚ್ಚು ಸಮಯ ಮೀಸಲಿಡುತ್ತೀರಿ. ನಿಮಗೆ ತುರ್ತಾಗಿ ಆಗಬೇಕಾದ ಕೆಲಸವನ್ನು ಗುಣಮಟ್ಟದ ಜತೆಗೆ ಪೂರ್ಣಗೊಳಿಸುವ ಬಗ್ಗೆ ಆಲೋಚನೆ ಮಾಡುತ್ತೀರಿ. ಯಾವುದಕ್ಕೂ ಹಿರಿಯ ಅಧಿಕಾರಿಗಳ ಸಲಹೆಯನ್ನೂ ಪಡೆಯೋಣ ಎಂದು ನಿಮಗೆ ಈ ಸಮಯದಲ್ಲಿ ಅನಿಸುತ್ತದೆ. ಶುಭದಿನ 18. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ದೈನಂದಿನ ಕಾರ್ಯ ಕಲಾಪಗಳಲ್ಲೇ ಉತ್ಸಾಹದ ಬದಲಾವಣೆ ಕಾಣಿಸಿಕೊಳ್ಳುತ್ತದೆ. ಆರಾಮವಾಗಿ ಕೆಲಸಗಳನ್ನು ಪೂರ್ಣಗೊಳಿಸುವುದು ಹೇಗೆ ಎಂಬ ವಿಚಾರ ನಿಮಗೆ ತಿಳಿಯುತ್ತದೆ. ಇದೆಲ್ಲದರ ಪರಿಣಾಮವಾಗಿ ಆರೋಗ್ಯ ಉತ್ತಮವಾಗಿರುತ್ತದೆ. ವೈಯಕ್ತಿಕ ಗುರಿಗಳ ಪೈಕಿ ಒಂದೊಂದಾಗಿ ಪೂರ್ತಿಗೊಳಿಸುತ್ತೀರಿ. ಉದ್ಯೋಗಸ್ಥರಿಗೆ ಕೆಲವು ಸಮಸ್ಯೆಗಳು ಕಾಡುತ್ತದೆ. ಶುಭದಿನ 15. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಸಂಗಾತಿ ಜತೆಗೆ ಮೇಲಿಂದ ಮೇಲೆ ಭಿನ್ನಾಭಿಪ್ರಾಯ ಕಾಣಿಸಿಕೊಳ್ಳುತ್ತದೆ. ಇದೇ ನಿಮ್ಮ ಸಮಸ್ಯೆಗೆ ಕಾರಣವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಮಾನಸಿಕವಾಗಿ ಬಹಳ ಕಿರಿಕಿರಿ ಅನುಭವಿಸುತ್ತೀರಿ. ಒತ್ತಡ ಎದುರಿಸುತ್ತಿರುವ ಸಂಬಂಧಗಳಲ್ಲಿ ಮತ್ತಷ್ಟು ಉದ್ವಿಗ್ನ ಪರಿಸ್ಥಿತಿ ಏರ್ಪಡುತ್ತದೆ. ವಾರಾಂತ್ಯದಲ್ಲಿ ವೈವಾಹಿಕ ಜೀವನದಲ್ಲಿ ಸಾಮರಸ್ಯ ಮೂಡಲು ಅವಕಾಶಗಳು ಸಿಗಲಿವೆ. ಶುಭದಿನ 16. ವಿಷ್ಣು ಸಹಸ್ರನಾಮ ಪಠಿಸಿರಿ.




ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾದ ಪ್ರಗತಿ ಇದೆ. ಸಂಬಂಧಪಟ್ಟ ವಿಚಾರಗಳಲ್ಲಿ ನಿಮ್ಮ ಗಮನ ಚೆನ್ನಾಗಿರುತ್ತದೆ. ಆದಾಯ ಮೂಲದಿಂದ ಹೆಚ್ಚುವರಿಯಾಗಿ ಅನುಕೂಲ ಪಡೆಯಲಿದ್ದೀರಿ. ವೈಯಕ್ತಿಕ ಸಂಬಂಧಗಳು ಸುಮಧುರವಾಗಿ ಇರುತ್ತವೆ. ಇದರಿಂದ ನಿಮ್ಮ ಸಂತೋಷ ಹೆಚ್ಚಾಗಲಿದೆ. ವಾರದ ಮಧ್ಯದಲ್ಲಿ ನಕಾರಾತ್ಮಕ ನಿರ್ಧಾರಗಳನ್ನು ಸರಿಪಡಿಸಿಕೊಳ್ಳುತ್ತೀರಿ. ಶುಭದಿನ 17. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ನಿಮ್ಮ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿ ಮುಗಿಸುತ್ತೀರಿ. ನಿಮ್ಮ ವರ್ಚಸ್ಸು ಹೆಚ್ಚಾಗಲಿದೆ. ಮೆಚ್ಚುಗೆಯಿಂದ ಸಂತೋಷ ಉಂಟಾಗುತ್ತದೆ. ಆರೋಗ್ಯ ಉತ್ತಮವಾಗಿರುತ್ತದೆ. ಈ ಸಮಯದಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದರಿಂದ ಸಕಾರಾತ್ಮಕ ಯೋಚನೆ ನಿಮ್ಮಲ್ಲಿ ಮೂಡುತ್ತದೆ. ವೈಯಕ್ತಿಕ ಸಂಬಂಧದಲ್ಲಿ ಕೆಲವು ವಿಚಾರಗಳು ಅಂದುಕೊಂಡಂತೆ ನಡೆಯುವುದಿಲ್ಲ. ಶುಭದಿನ 19. ಹನುಮಾನ್ ಚಾಲೀಸ್ ಓದಿರಿ.